೧೪

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ಪಿ ಸುಜಾ ಕುಶಾಲಪ್ಪ, ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸರ್ಕಾರದ ಉತ್ತರ

## ಶೂನ್ಯ ವೇಳೆಯ ಪ್ರಸ್ತಾಪ

**"ರಾಜ್ಯ ಸರ್ಕಾರವು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ 2024-25ಕ್ಕೆ ವಾಸ್ತವಿಕವಾಗಿ ಮತ್ತು 2025-26ನೇ ಸಾಲಿಗೆ ಪ್ರಸ್ತಾವಿಕವಾಗಿ ಶೂನ್ಯ ಬಡ್ಡಿದರದಲ್ಲಿ ರೈತರಿಗೆ ವಿತರಿಸಿದ ಅಲ್ಪಾವದಿ ಬೆಳೆಸಾಲ, ಪಶುಸಂಗೋಪನೆ ಸಾಲ ಮತ್ತು ಮೀನುಗಾರಿಕೆ ಸಾಲಗಳು ಮತ್ತು ಮಧ್ಯಮಾವಧಿ ಸಾಲಕ್ಕೆ ಬಡ್ಡಿ ಸಹಾಯಧನದ ದರವನ್ನು ಕಡಿತಗೊಳಿಸಲಾಗಿರುತ್ತದೆ ಮತ್ತು 2025-26ನೇ ಸಾಲಿಗೆ ಪ್ರಸ್ತಾವಿಕವಾಗಿ ಬಡ್ಡಿ ಸಹಾಯ ಧನ ಶೇಕಡ 2.00 ರಿಂದ ಶೇ 1.75ಕ್ಕೆ ಇಳಿಕೆ ಮಾಡಿ ನಿಗಧಿ ಮಾಡಿರುವುದರಿಂದ ಮತ್ತು ಸಂಘವು ಸ್ವಂತ ಬಂಡವಾಳದಿಂದ ನೇರವಾಗಿ ರೈತರಿಗೆ ವಿತರಿಸಿದ ಸಾಲಗಳಿಗೆ ಗೆ ಶೇ.4.60ಕ್ಕೆ ನಿಗಧಿ ಮಾಡಿರುವುದು ಹಾಗೂ ರೂ.3 ರಿಂದ 5 ಲಕ್ಷದವರೆಗೆ ಸಂಘವು ಸ್ವಂತ ಬಂಡವಾಳದಿಂದ ನೇರವಾಗಿ ರೈತರಿಗೆ ವಿತರಿಸಿದ ಸಾಲಗಳಿಗೆ ಶೇ.9.10 ನಿಗಧಿ ಮಾಡಿರುತ್ತಾರೆ. ಮಧ್ಯಮಾವಧಿ ಮತ್ತು ದೀರ್ಘಾವಧಿ ಹಂಚಿಕೆ ಮಾಡುವ ಕೃಷಿ ಸಾಲಗಳನ್ನು ಸಂಘವು ತನ್ನ ಸ್ವಂತ ಬಂಡಾವಾಳದಿಂದ ವಿತರಣೆ ಮಾಡಿದಲ್ಲಿ ಈ ಮೊದಲು ಶೇ.7 02 ರಷ್ಟು ಇದ್ದ ಬಡ್ಡಿ ದರವನ್ನು ಶೇ.6.23ಕ್ಕೆ ಇಳಿಕೆ ಮಾಡಿರುವುದರಿಂದ ಸಹಕಾರ ಸಂಘಗಳು ಆರ್ಥಿಕ ನಷ್ಟಕ್ಕೆ ಒಳಗಾಗಲಿದ್ದು ಅವುಗಳ ಕಾರ್ಯ ನಿರ್ವಹಣೆಯು ದುಸ್ಥರವಾಗುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಗ್ರಾಮಾಂತರ ಮಟ್ಟದಲ್ಲಿ ರೈತರ ಆರ್ಥಿಕ ಸ್ವಾವಲಂಬನೆಗೆ ಪ್ರಮುಖ ಕೇಂದ್ರವಾಗಿದ್ದು, ಲಾಭಗಳಿಸುವ ಉದ್ದೇಶಕ್ಕೂ ಹೆಚ್ಚಾಗಿ ಸೇವೆಯನ್ನೇ ಗುರಿಯಾಗಿಸಿಕೊಂಡಿರುತ್ತವೆ. ಆದ್ದರಿಂದ ರಾಜ್ಯ ಸರ್ಕಾರವು ನೀಡುವ ಶೂನ್ಯ ಬಡ್ಡಿ ದರದ ಸಾಲಗಳನ್ನು ಮತ್ತು ಮಧ್ಯಮಾವಧಿ-ದೀರ್ಘಾವಧಿಗೆ ಸಾಲ ವಿತರಣೆ ಮಾಡಿ ಪ್ರತಿ ವರ್ಷವು ಶೇ 99.00 ಕ್ಕೂ ಹೆಚ್ಚು ವಸೂಲಾತಿಯನ್ನು ಮಾಡುತ್ತಾ ಆರ್ಥಿಕ ಶಿಸ್ತನ್ನು ಸಹ ಕಾಪಾಡಿಕೊಂಡು ಸಹಕಾರ ಸಂಘಗಳು ಪಾಲಿಸಿಕೊಂಡು ಬಂದಿರುತ್ತವೆ. ಸರ್ಕಾರವು ನೀಡುವ ಬಡ್ಡಿ ಸಹಾಯಧನವೇ ಸಂಘದ ಆದಾಯದ ಪ್ರಮುಖ ಮೂಲವಾಗಿದ್ದು, ಇದನ್ನು ಇಳಿಕೆ ಮಾಡುವುದರಿಂದ ಸಂಘಗಳು ನಷ್ಟದ ಸುಳಿಗೆ ಸಿಲುಕಿ ಉತ್ತಮ ಸೇವೆ ನೀಡಲು ಸಹ ಕಷ್ಟ ಸಾಧ್ಯವಾಗಲಿದೆ. ಆದ್ದರಿಂದ ಸಂಘದ ಮನವಿಯನ್ನು ಪುರಸ್ಕರಿಸಿ, ಸರ್ಕಾರದಿಂದ ಸಂಘದ ಬೇಡಿಕೆಯಂತೆ ಬಡ್ಡಿ ಸಹಾಯ ಧನವನ್ನು ಪರಿಷ್ಕರಿಸಿ, ಮಂಜೂರು ಮಾಡುವಂತೆ ಮಾನ್ಯ ಮುಖ್ಯಮಂತ್ರಿಗಳ ಬಳಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸ ಬಯಸುತ್ತೇನೆ."**

## ಮಾಹಿತಿ

ಕೃಷಿ ಸಾಲದ ಮೇಲಿನ ಬಡ್ಡಿ ಸಹಾಯಧನ ಯೋಜನೆಯಲ್ಲಿ ಬಡ್ಡಿ ಸಹಾಯಧನ ನಿಗದಿಪಡಿಸುವಾಗ ಸರ್ಕಾರ ಪ್ಯಾಕ್ಸ್ ಗಳ ಮಾರ್ಜಿನ್ ಮೊತ್ತವನ್ನು ಶೇ.2 ರಿಂದ ಶೇ.1.75 ಕ್ಕೆ ಇಳಿಸಿದ್ದು, ಈ ಹಿಂದೆ ಇದ್ದಂತೆ ಶೇ.3% ಕ್ಕೆ ಹೆಚ್ಚಿಸಲು ಪ್ಯಾಕ್ಸ್ ಗಳಿಂದ ಮನವಿಗಳು ಬಂದಿರುತ್ತವೆ.

ಕೃಷಿ ಸಾಲಗಳ ಮೇಲಿನ ಬಡ್ಡಿ ಸಹಾಯಧನ ಯೋಜನೆ 2004-05 ರಿಂದ ಪ್ರಾರಂಭವಾಗಿದ್ದು, ಇದುವರೆಗೆ ಬಹುತೇಕ ವರ್ಷಗಳಲ್ಲಿ ಪ್ಯಾಕ್ಸ್ ಗಳಿಗೆ ಶೇ.2 ರ ಮಾರ್ಜಿನ್

ನೀಡಲಾಗುತ್ತಿತ್ತು. ಒಂದೆರಡು ವರ್ಷಗಳಲ್ಲಿ ಮಾತ್ರ ಕೇಂದ್ರ ಸರ್ಕಾರ ಹೆಚ್ಚಿನ ಬಡ್ಡಿ ಸಹಾಯಧನ ನೀಡಿದ್ದರಿಂದ ಶೇ.2 ಕ್ಕಿಂತ ಹೆಚ್ಚಿಗೆ ಮಾರ್ಜಿನ್ ನೀಡಲಾಗಿತ್ತು.

ಕೇಂದ್ರ ಸರ್ಕಾರ 2006-7 ರಿಂದ ಶೇ.7 ರ ಬಡ್ಡಿ ದರದಲ್ಲಿ ಬೆಳೆ ಸಾಲ ವನ್ನು ವಿತರಿಸುವ ಯೋಜನೆಯನ್ನು ಜಾರಿಗೆ ತಂದಾಗ, ನಬಾರ್ಡ್ ಸಹಕಾರ ಸಂಘಗಳಿಗೆ ಶೇ.5.50 ದರದಲ್ಲಿ ನೀಡುತ್ತಿದ್ದ ಪುನರ್ಧನದ ಬಡ್ಡಿಯನ್ನು ಶೇ.4.00. ಕ್ಕೆ ಇಳಿಸಿ ಮೂರು ಹಂತದ (ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್ ಮತ್ತು ಪ್ಯಾಕ್ಸ್) ಸಹಕಾರ ಸಂಘಗಳ ಮಾರ್ಜಿನ್ ಮೊತ್ತವನ್ನು ಶೇ.4.5 ರಿಂದ ಶೇ.3.00 ಕ್ಕೆ ಇಳಿಸಲು ತಿಳಿಸಲಾಗಿತ್ತು. ಸದ್ಯ ನಬಾರ್ಡ್ ರಿಯಾಯಿತಿ ಬಡ್ಡಿ ದರದಲ್ಲಿ ನೀಡುವ ಪುನರ್ಧನದ ಬಡ್ಡಿ ದರ ಶೇ.4.50 ಇರುವುದರಿಂದ ಮೂರು ಹಂತದ ಸಹಕಾರ ಸಂಘಗಳ ಮಾರ್ಜಿನ್ ಶೇ.2.50 ಕ್ಕೆ ಇಳಿಸಬೇಕಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

ಈ ಪತ್ರದ ಅನುಸಾರ ಮೂರು ಹಂತದ ಸಹಕಾರ ಸಂಘಗಳ ವ್ಯವಸ್ಥೆಯಲ್ಲಿ ಶೇ.2.50 ರ ಮಾರ್ಜಿನ್ ನ್ನು ಮಾತ್ರ ನಿಗದಿಪಡಿಸಬೇಕಿತ್ತು. ಆದರೆ ಸಂಘಗಳ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಕೊಂಡು ರಾಜ್ಯ ಸರ್ಕಾರ 2021-22 ನೇ ಸಾಲಿನ ವರೆಗೆ ಅಪೆಕ್ಸ್ ಬ್ಯಾಂಕಿಗೆ ಶೇ.0.5, ಡಿಸಿಸಿ ಬ್ಯಾಂಕಿಗೆ ಶೇ.1.80 ಮತ್ತು ಪ್ಯಾಕ್ಸ್ ಗಳಿಗೆ ಶೇ.2.00 ಒಟ್ಟಾರೆ ಶೇ.4.30 ರ ಮಾರ್ಜಿನ್ ನ್ನು ನೀಡಲಾಗುತ್ತಿತ್ತು.

ಕೇಂದ್ರ ಸರ್ಕಾರ ಈ ಯೋಜನೆಯಲ್ಲಿ ಶೇ.7 ರ ಬಡ್ಡಿ ದರದಲ್ಲಿ ರೈತರಿಗೆ ಸಾಲ ವಿತರಿಸಲು ತಿಳಿಸಿ, ಅವಧಿಯೊಳಗೆ ಮರುಪಾವತಿಸಿದ ರೈತರಿಗೆ ಶೇ.3 ರ ಪ್ರೋತ್ಸಾಹಧನ ನೀಡುತ್ತಿರುತ್ತದೆ. ರಾಜ್ಯ ಸರ್ಕಾರದ ಶೂನ್ಯ ಬಡ್ಡಿ ದರದ ಯೋಜನೆಯನ್ವಯ ವ್ಯತ್ಯಾಸದ ಶೇ.4 ನ್ನು ಮಾತ್ರ ಬಡ್ಡಿ ಸಹಾಯಧನದ ದರವನ್ನು ರಾಜ್ಯ ಸರ್ಕಾರ ನಿಗದಿಪಡಿಸಬೇಕಿತ್ತು. ಆದರೆ ಮೂರು ಹಂತದ ಸಹಕಾರ ಸಂಘಗಳ ಸಬಲತೆಯನ್ನು ಗಮನದಲ್ಲಿಟ್ಟುಕೊಂಡು ಶೇ.6 ರ ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರ ನಿಗದಿಪಡಿಸಿದ್ದು, ಶೇ.2 ರಷ್ಟು ಹೆಚ್ಚಿನ ಬಡ್ಡಿ ಸಹಾಯಧನವನ್ನು ನೀಡಿರುತ್ತದೆ.

ನಬಾರ್ಡ್ ರಿಯಾಯಿತಿ ಬಡ್ಡಿ ದರದ ಪುನರ್ಧನದ ಮಿತಿಯನ್ನು ಶೇ.42 ರಷ್ಟು ಕಡಿಮೆ ಮಾಡಿ ಹೆಚ್ಚಿನ ಬಡ್ಡಿ ದರದಲ್ಲಿ ಪುನರ್ಧನ ನೀಡುತ್ತಿದ್ದರೂ ಸಹ ಕೇಂದ್ರ ಸರ್ಕಾರ ಸಹಕಾರ ಸಂಘಗಳಿಗೆ ನೀಡುತ್ತಿದ್ದ ಬಡ್ಡಿ ಸಬ್ ವೆಷನ್ ನ್ನು ಈ ಹಿಂದಿನಂತೆಯೇ ಶೇ.1.50 ರಲ್ಲಿ ಮುಂದುವರೆಸಿದ್ದರಿಂದ ರಾಜ್ಯ ಸರ್ಕಾರದ ಮೇಲೆ ಹೆಚ್ಚಿನ ಹೊರೆ ಬೀಳುತ್ತಿರುತ್ತದೆ, (ನಬಾರ್ಡ್ 2023-24 ರಲ್ಲಿ ರಿಯಾಯಿತಿ ಬಡ್ಡಿ ದರದಲ್ಲಿ ರೂ.5600 ಕೋಟಿಗಳ ಸಾಲ ನೀಡಿದ್ದು, ಈ ಮಿತಿಯನ್ನು 2024-25 ರಲ್ಲಿ ರೂ. 3236.11 ಕೋಟಿ ಮತ್ತು 2025-26 ನೇ ಸಾಲಿನಲ್ಲಿ ರೂ. 3415 ಕೋಟಿ ಮೊತ್ತಕ್ಕೆ ಇಳಿಸಿರುತ್ತದೆ)

ಇತ್ತೀಚಿನ ವರ್ಷಗಳಲ್ಲಿ ರೈತರಿಗೆ ಸರ್ಕಾರ ರಿಯಾಯಿತಿ ಬಡ್ಡಿ ದರದ ಸಾಲದ ಯೋಜನೆಯನ್ನು ಜಾರಿಗೊಳಿಸಿರುವುದರಿಂದ ಕೃಷಿ ಸಾಲದ ಬೇಡಿಕೆ ಮತ್ತು ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿದ್ದು, ಮೂರು ಹಂತದ ಸಂಸ್ಥೆಗಳ ಆದಾಯ ಕೂಡ ಸಹಜವಾಗಿ ಹೆಚ್ಚಳ ಆಗುವುದರಿಂದ ಹಾಗೂ ನೆರೆಯ ರಾಜ್ಯಗಳಾದ ತೆಲಂಗಾಣ, ಆಂದ್ರ ಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಪ್ಯಾಕ್ಸ್ ಗಳಿಗೆ ಮಾರ್ಜಿನ್ ಕ್ರಮವಾಗಿ ಶೇ.0.75, 1.25, 1.80 ಮತ್ತು 2 ರಷ್ಟಿರುವುದರಿಂದ, 2022-23 ನೇ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕ್ ಗೆ ಶೇ.0.40 , ಡಿಸಿಸಿ ಬ್ಯಾಂಕಿಗೆ ಶೇ.1.50 ಕ್ಕೆ ಕಡಿಮೆ ಗೊಳಿಸಿ 2024-25 ಮತ್ತು 2025-26 ನೇ ಸಾಲಿನಿಂದ ಪ್ಯಾಕ್ಸ್ ಗಳಿಗೂ ಸಹ ಶೇ.1.75 ರ ಮಾರ್ಜಿನ್ ನ್ನು ಕಡಿತಗೊಳಿಸಲಾಗಿದೆ.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೌಕರರ ಜಿಲ್ಲಾ ಮಟ್ಟದ ರಾಜ್ಯ ಮಟ್ಟದ ಸಂಘಗಳು ಸಂಘಗಳ ಆಡಳಿತ ವೆಚ್ಚ/ಸಿಬ್ಬಂದಿ ವೆಚ್ಚ ಭರಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿ ಸಂಘಗಳ ಮಾರ್ಜಿನ್ ಮೊತ್ತವನ್ನು ಶೇ.3 ಕ್ಕೆ ಹೆಚ್ಚಿಸಲು

ಮನವಿಗಳು ಬಂದ ಹಿನ್ನಲೆಯಲ್ಲಿ ಬೆಳೆ ಸಾಲದ ಬಡ್ಡಿ ಸಹಾಯಧನ ಯೋಜನೆಯಡಿಯಲ್ಲಿ ನೆರೆಯ ರಾಜ್ಯಗಳಾದ ತೆಲಂಗಾಣ, ಆಂದ್ರ ಪ್ರದೇಶ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಪ್ಯಾಕ್ಸ್ ಗಳಿಗೆ ಮಾರ್ಜಿನ್ ಕ್ರಮವಾಗಿ ಶೇ.0.75, 1.25, 1.80 ಮತ್ತು 2 ರಷ್ಟಿರುವ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಿ ಸೂಕ್ತ ನಿರ್ಣಯ ಕೈಗೊಳ್ಳಲು ಕೋರಿ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ.

ಪ್ಯಾಕ್ಸ್ ಗಳ ಸ್ವಂತ ಬಂಡವಾಳದಿಂದ ವಿತರಿಸಿದ ಸಾಲಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಕೃಷಿ ಸಾಲ ವಿತರಣೆಯಲ್ಲಿ ಪ್ಯಾಕ್ಸ್‌ಗಳ ಸ್ವಂತ ಬಂಡವಾಳ ಕಡಿಮೆ ಇದ್ದುದರಿಂದ ಸರ್ಕಾರ ಡಿಸಿಸಿ ಬ್ಯಾಂಕ್ ಹಾಗೂ ಪ್ಯಾಕ್ಸ್ ಗಳ ಸ್ವಂತ ಬಂಡವಾಳಗಳಿಗೆ ಸಹ ಒಂದೇ ಬಗೆಯ ಬಡ್ಡಿ ಸಹಾಯಧನವನ್ನು ನಿಗದಿಪಡಿಸುತ್ತಿತ್ತು. ಸದ್ಯ ಡಿಸಿಸಿ ಬ್ಯಾಂಕುಗಳಿಗೆ ನೀಡುವ ಮಾರ್ಜಿನ್ ಶೇ.1.50 ನ್ನು ಸಹಜವಾಗಿ ಕಡಿಮೆ ಮಾಡಿ ಡಿಸಿಸಿ ಬ್ಯಾಂಕುಗಳ ಠೇವಣಿಗಳ ವೆಚ್ಚಗಳಿಗಿಂತ ಪ್ಯಾಕ್ಸ್ ಗಳ ಠೇವಣಿಗಳ ವೆಚ್ಚವನ್ನು ಶೇ.0.5 ಕ್ಕಿಂತ ಹೆಚ್ಚಿಗೆ ಪರಿಗಣಿಸಿ ಸರ್ಕಾರ ಬಡ್ಡಿ ಸಹಾಯಧನ ನಿಗದಿಪಡಿಸಿರುತ್ತದೆ. ಪ್ಯಾಕ್ಸ್ ಗಳು ಇದಕ್ಕಿಂತಲೂ ಹೆಚ್ಚಿನ ಬಡ್ಡಿ ದರಗಳನ್ನು ಹೊಂದಿದ್ದರೆ ಅದು ಸ್ಪರ್ಧಾತ್ಮಕ ದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ ಹಾಗೂ ಒಂದು ವೇಳೆ ಹೆಚ್ಚಿಗೆ ಇದ್ದರೂ ಸಹ ಇಂತಹ ಸಂಧರ್ಭದಲ್ಲಿ ಡಿಸಿಸಿ ಬ್ಯಾಂಕುಗಳಿಂದ ಸಾಲ ಪಡೆದು ರೈತ ಸದಸ್ಯರಿಗೆ ಸಾಲ ವಿತರಿಸಲು ಅವಕಾಶ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ಶೇ.7 ರ ಬಡ್ಡಿ ದರದಲ್ಲಿ ಬೆಳೆ ಸಾಲ ನೀಡುವ ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಶೇ.2. ರಷ್ಟು ಹೆಚ್ಚಿನ ಬಡ್ಡಿ ಪ್ರೋತ್ಸಾಹಧನವನ್ನು ನೀಡುತ್ತಿರುವುದರಿಂದ, ಕೇಂದ್ರ ಸರ್ಕಾರ ಸಹಕಾರ ಸಂಘಗಳಿಗೆ ನೀಡುವ ಬಡ್ಡಿ ಸಬ್‌ವೆಷನ್ ನ್ನು ಶೇ.1.5 ರಿಂದ ಶೇ.2.00 ಕ್ಕೆ ಹೆಚ್ಚಿಸಿದಲ್ಲಿ ಪ್ಯಾಕ್ಸ್ ಗಳ ಮಾರ್ಜಿನ್ ಮೊತ್ತವನ್ನು ಹೆಚ್ಚಿಸಲು ಸಹಾಯವಾಗುತ್ತದೆ.

**ಸಂಖ್ಯೆ: ಸಿಒ 343 ಸಿಎಲ್‌ಎಸ್ 2025**

(ಸಿದ್ದರಾಮಯ್ಯ)

ಮುಖ್ಯಮಂತ್ರಿ